## ಬಿ.ಬಿ.ಸಿ. ತಿರಸ್ಕರಿಸಿದ "ಆರ್ಯರ ಆಕ್ರಮಣ ಸಿದ್ಧಾಂತ"

**ವಾರ್ತಾ ವಿಶ್ಲೇಷಣೆ**

**ಬಿ.ಬಿ.ಸಿ.** ವಾರ್ತಾವಾಹಿನಿಯು ತನ್ನದೇ ಆದ ಇಂಟರ್‌ನೆಟ್ ವೆಬ್‌ಸೈಟ್ ಹೊಂದಿದೆ. ಅದರಲ್ಲಿ ಇಡೀ ವಿಶ್ವದ ವಿದ್ಯಮಾನಗಳು ಮತ್ತು ದೇಶ ವಿದೇಶಗಳ ಬಗ್ಗೆ ಮಾಹಿತಿ ಲಭ್ಯವಿವೆ. ಮ್ಯಾಕ್ಸ್ ಮುಲ್ಲರ್ ಹಾಗೂ ಇತರ ವಿದ್ವಾಂಸರು ಹುಟ್ಟುಹಾಕಿದ ಆರ್ಯರು ಏಷ್ಯಾ ಮೈನರ್ ನಿಂದ ಆಕ್ರಮಣಕಾರರಾಗಿ ಬಂದವರು ಎಂಬ ಟೊಳ್ಳು ಸಿದ್ಧಾಂತದ ಬಗೆಗೆ ಇತ್ತೀಚಿನ ಸಂಶೋಧನೆಗಳ ವಿವರವನ್ನು ಇಲ್ಲಿ ಕಾಣಬಹುದು.

ಈ ಆಕ್ರಮಣ ವಾದವನ್ನು ಪ್ರಚುರ ಪಡಿಸಿದ್ದು ಆಗ ಭಾರತದ ಪ್ರಭುತ್ವದಲ್ಲಿದ್ದ ಬ್ರಿಟಿಷ್ ಸರ್ಕಾರ. ಅಲ್ಲಿನ ಕೆಲವು ವಿದ್ವಾಂಸರು ಅರಸೊತ್ತಿಗೆಯನ್ನು ಸಂತುಷ್ಟಗೊಳಿಸಲು ಹಾಗೂ ತಮ್ಮ ಮೇಲ್ಮೆಯನ್ನು ಗುಲಾಮ ಜನಾಂಗ ಒಪ್ಪಿಕೊಳ್ಳುವಂತೆ ಮಾಡಲು ಹೂಡಿದ ಒಂದು ತಂತ್ರವಷ್ಟೆ ಈ ವಾದ ಎನ್ನುವುದು ಈಗ ಬಯಲಾಗಿದೆ. ಆ ವಿದ್ವಾಂಸರು ೧೫೦ ವರ್ಷಗಳ ಹಿಂದೆ ಭಾಷಾಶಾಸ್ತ್ರ, ಪುರಾತತ್ತ್ವ ಶಾಸ್ತ್ರ ಮತ್ತು ಜನಾಂಗೀಯ ಅಧ್ಯಯನಗಳನ್ನು ಕೈಗೊಂಡು, ಪ್ರಾಚೀನ ಕಾಲದಲ್ಲಿ ಭಾರತದ ಮೇಲೆ ಉತ್ತರದಿಂದ ಬಂದ ಆರ್ಯರು ಆಕ್ರಮಣ ಮಾಡಿದರು ಎಂಬ ಸಿದ್ಧಾಂತವನ್ನು ಪ್ರಚಾರ ಮಾಡಿದರು. ಅದನ್ನೇ ನಮ್ಮ ಶಾಲಾಕಾಲೇಜಿನ ಶಿಕ್ಷಣದಲ್ಲಿ ಪರಮಸತ್ಯವೆಂದು ವಿದ್ಯಾರ್ಥಿಗಳಿಗೆ ನುಂಗಿಸಲಾಗುತ್ತಿತ್ತು. ಆದರೆ ಇತ್ತೀಚಿನ ಹೊಸ ಹೊಸ ಆವಿಷ್ಕಾರಗಳು ಹಾಗೂ ಸಂಶೋಧನೆಗಳಿಂದ ದೊರಕಿರುವ ಕೆಲವು ನಿರ್ಣಯಾತ್ಮಕ ಪುರಾವೆಗಳು ಆರ್ಯರ ಆಕ್ರಮಣ ಸಿದ್ಧಾಂತ ಎಷ್ಟು ಬಾಲಿಶವಾದದ್ದು, ಹುರುಳಿಲ್ಲದ್ದು ಹಾಗೂ ದೋಷ ಪೂರ್ಣವಾದದ್ದು ಎಂಬುದನ್ನು ತೋರಿಸಿವೆ. ಭಾರತೀಯ ಇತಿಹಾಸವೆಂಬುದು ಆಕ್ರಮಣಕಾರರ ಕಾಣಿಕೆಯಲ್ಲ, ಪುರಾತನ ಯುಗದಿಂದ ಇಂದಿನವರೆಗೂ ಅವ್ಯಾಹತವಾಗಿ ಉಳಿದಿರುವ ಸಂಸ್ಕೃತಿ ಎನ್ನುವ ಸತ್ಯಾಂಶವು ಈಗ ಸಂಶೋಧನೆಗಳಿಂದ ತಿಳಿದುಬಂದಿದೆ. ಹಾಗೆಂದ ಮಾತ್ರಕ್ಕೆ, ಭಾರತೀಯ ಸಂಸ್ಕೃತಿಯ ಮೇಲೆ ಇತರ ಸಂಸ್ಕೃತಿಗಳ ಪ್ರಭಾವವನ್ನು ಈ ಆಧುನಿಕ ಇತಿಹಾಸಕಾರರು ಅಲ್ಲಗಳೆಯುತ್ತಿಲ್ಲ. ಆದರೆ ಅವು ಹಿಂದೂ ಧರ್ಮದ ಬೆಳವಣಿಗೆಯಲ್ಲಿ ಪ್ರಧಾನ ಅಂಶಗಳು ಎಂದು ಈಗ ಅವರು ಪರಿಗಣಿಸುತ್ತಿಲ್ಲ. ಹಳೆಯ ಈ ಆಕ್ರಮಣ ವಾದದಿಂದ ಭಾರತದ ಇತಿಹಾಸಕ್ಕಾಗಿರುವ ಅಪಾರ ಹಾನಿ ಹಾಗೂ ಅಪಾಯಗಳನ್ನೂ ಬಿ.ಬಿ.ಸಿ. ವೆಬ್ ಸೈಟ್ ಹೀಗೆ ಪಟ್ಟಿ ಮಾಡಿದೆ.

೧. ಆರ್ಯರ ಆಕ್ರಮಣವಾದವು ಭಾರತೀಯ ಸಂಸ್ಕೃತಿಯು ಪರಕೀಯರಿಂದ ಭಾರತಕ್ಕೆ ಬಂದದ್ದು ಎಂಬಂತೆ ಬಿಂಬಿಸುತ್ತದೆ. ಆಕ್ರಮಣಕಾರರಿಗೆ ಅವರೇ ಭಾರತೀಯ ಸಂಸ್ಕೃತಿಯ ಕಾರಣಕರ್ತರು ಎಂಬ ಹೆಗ್ಗಳಿಕೆಯನ್ನು ಇದು ನೀಡುತ್ತದೆ.

೨. ಪವಿತ್ರವಾದ ಹಿಂದೂ ಧರ್ಮಗ್ರಂಥಗಳು ಭಾರತದೇಶಕ್ಕೆ ಸೇರಿದವುಗಳಲ್ಲ ಹಾಗೂ ಅವುಗಳು ಇತ್ತೀಚಿನವು ಎನ್ನುವ ಈ ಸಿದ್ಧಾಂತ ಭಾರತದ ಸಂಸ್ಕೃತಿಯನ್ನು ಅಪಮೌಲ್ಯಗೊಳಿಸುವ ಪ್ರಯತ್ನವಲ್ಲದೆ ಮತ್ತೇನಲ್ಲ.

೩. ಭಾರತೀಯ ಸಂಸ್ಕೃತಿಯು ಇತರ ಸಂಸ್ಕೃತಿಗಳ ಕೆಲವು ಅಂಶಗಳ ಮಿಶ್ರಣ, ಆದ್ದರಿಂದ ಅದಕ್ಕೆ ಅದರದೇ ಆದ ಸ್ವಂತಿಕೆ ಇಲ್ಲ, ಹೀಗಾಗಿ, ನಿಜವಾದ ಅರ್ಥದಲ್ಲಿ ಇದು ಸಂಸ್ಕೃತಿಯೇ ಅಲ್ಲ ಎಂಬ ಭಾವನೆಯನ್ನು ಇದು ಮೂಡಿಸುತ್ತದೆ. ಹಾಗೂ ಹಿಂದೂ ಧರ್ಮವು ಪರಕೀಯರ ಬಳುವಳಿ, ಅದೊಂದು ಭಾರತೀಯ ಧರ್ಮವೇ ಅಲ್ಲ ಹಾಗೂ ಇದು ಭಾರತೀಯರ ಮೇಲೆ ಆರ್ಯ ಜನಾಂಗದವರು ದಬ್ಬಾಳಿಕೆ ನಡೆಸಿ ಜಯಗಳಿಸಿದ ಫಲಶ್ರುತಿ ಎಂಬುದನ್ನು ಇದು ಸೂಚಿಸುತ್ತದೆ.

೪. ಭಾರತೀಯ ಸಂಸ್ಕೃತಿ ನಿಂತ ನೀರಿನಂತೆ ಇದೆ. ಅದು ಪರಿವರ್ತನೆಯನ್ನು ಪಡೆದುಕೊಂಡದ್ದು ಇತರ ಸಂಸ್ಕೃತಿಗಳ ಪ್ರಭಾವದಿಂದ ಮಾತ್ರ ಎಂಬ ಆಶಯ ಆರ್ಯರ ಆಕ್ರಮಣ ವಾದದಲ್ಲಿ ಧ್ವನಿತವಾಗಿದೆ.

೫. ಈ ಸಿದ್ಧಾಂತವು ಜನಾಂಗೀಯ ದೃಷ್ಟಿಯಿಂದಲೂ ಒಂದು ಅಸಂಬದ್ಧವಾದ ವಾದವಾಗಿದೆ. ಅನಾಗರಿಕರಾಗಿದ್ದ ಭಾರತೀಯ ಮೂಲ ನಿವಾಸಿಗಳಿಗೆ ತಮ್ಮದೇ ಆದ ಧಾರ್ಮಿಕ ಭಾವನೆಗಳನ್ನು ಬೆಳೆಸಿಕೊಳ್ಳುವ ಸೃಜನಾತ್ಮಕತೆ ಇರಲಿಲ್ಲ, ದಕ್ಷಿಣ ಭಾರತದಲ್ಲಿರುವ ಕಪ್ಪು ಬಣ್ಣದ ದ್ರಾವಿಡರು, ತಮ್ಮ ಧರ್ಮವನ್ನು ಎರವಲು ಪಡೆದುಕೊಂಡಿರುವುದು ಈಗ ಉತ್ತರ ಭಾರತದ ನಿವಾಸಿಗಳಾದ ಶ್ವೇತ ವರ್ಣದ ಆರ್ಯ ಆಕ್ರಮಣಕಾರರಿಂದ ಎಂದು ಹೇಳುವ ಅವಹೇಳನಕಾರಿ ಸಿದ್ಧಾಂತ ಇದು. ಹೀಗಾಗಿ ಶ್ವೇತವರ್ಣೀಯರೇ ಶ್ರೇಷ್ಠರು ಎಂದು ಹೇಳುತ್ತ ವರ್ಣಭೇಧದ ಆಧಾರದ ಮೇಲೆ ಜನಾಂಗಗಳ ಮೌಲ್ಯವನ್ನು ನಿರ್ಧರಿಸುವ, ಅದರ ಮೂಲಕ ಹಿಂದೂ ಸಮಾಜದಲ್ಲಿರುವ ಜಾತಿವ್ಯವಸ್ಥೆಯ ಮೂಲವನ್ನು ಹುಡುಕುವ ವಿಚ್ಛೇದಕ ಸಿದ್ಧಾಂತ ಇದಾಗಿದೆ.

೬. ಮೇಲಿನವುಗಳಲ್ಲದೆ, ಇನ್ನೊಂದು ಆಸಕ್ತಿ ಕೆರಳಿಸುವ ಅಂಶವೆಂದರೆ, ಆರ್ಯರ ಆಕ್ರಮಣ ವಾದವು ಬ್ರಿಟಿಷರ ರಾಜ್ಯಶಾಹಿಗೆ ಸೈದ್ಧಾಂತಿಕ ಹಾಗೂ ಐತಿಹಾಸಿಕ ಸಮರ್ಥನೆಯನ್ನು ನೀಡಿತು ಎನ್ನುವುದು. ಆರ್ಯಮೂಲದ ಉತ್ತರ ಭಾರತದ ಜನರು ಯುರೋಪಿನಿಂದ ಬಂದವರಾದ್ದರಿಂದ ಬ್ರಿಟಿಷ್ ಜನರಿಗೆ ಜನಾಂಗೀಯವಾಗಿ ನಿಕಟರಾಗಿದ್ದಾರೆ ಎಂಬ ಅಭಿಪ್ರಾಯವನ್ನು ಅದು ಮೂಡಿಸಲು ಸಹಕಾರಿ. ಬ್ರಿಟಿಷರು ಆಕ್ರಮಣಕಾರರಾದರೆ, ಅದೇ ದೃಷ್ಟಿಯಲ್ಲಿ, ಆರ್ಯರನ್ನೂ ಕೂಡ ಆಕ್ರಮಣಕಾರರೆಂದೇ ಪರಿಗಣಿಸಬೇಕೆಂಬ ವಿಕೃತವಾದವನ್ನು ಇದು ಪ್ರತಿಪಾದಿಸಿತು.

೭. ಭಾರತೀಯರ ಬೌದ್ಧಿಕ ಔನ್ನತ್ಯವನ್ನು ಈ ವಾದವು ಅಲ್ಲಗೆಳೆದು ಭಾರತೀಯ ವಿಜ್ಞಾನ ಮತ್ತು ಸಂಸ್ಕೃತಿಗಳು ಎರವಲು ಪಡೆದವು ಎಂದು ಬಿಂಬಿಸುತ್ತದೆ.

ಈ ಎಲ್ಲ ಕಾರಣಗಳಿಂದ ಆರ್ಯರ ಆಕ್ರಮಣ ವಾದವು ಭಾರತೀಯ ಸಭ್ಯತೆಯ ಮೂಲಕ್ಕೇ ಕೊಡಲಿ ಪೆಟ್ಟು ನೀಡುವ ಅಸಹನೀಯ ಸಿದ್ಧಾಂತವಾಗಿದೆ ಎಂದು ಬಿ.ಬಿ.ಸಿ. ವೆಬ್ ಸೈಟ್ ಬಣ್ಣಿಸುತ್ತದೆ.

ಸ್ವಾಮಿ ವಿವೇಕಾನಂದರು ಚೆನ್ನೈನಲ್ಲಿ ಮಾಡಿದ ಭಾಷಣದಲ್ಲಿ ಹೀಗೆ ಹೇಳಿದ್ದರು: " ದಕ್ಷಿಣ ಭಾರತದಲ್ಲಿ ದ್ರಾವಿಡರೆಂಬ ಜನಾಂಗವಿತ್ತು, ಅದು ಉತ್ತರದ ಆರ್ಯ ಜನಾಂಗಕ್ಕಿಂತ ಭಿನ್ನವಾದುದು ಎಂಬಂತಹ ಬಾಲಿಶ ವಾದಗಳನ್ನು ಎಂದೂ ನಂಬಬೇಡಿರಿ. ಆದಕ್ಕೆ ಯಾವ ಆಧಾರವೂ ಇಲ್ಲ ." ಇಷ್ಟು ವರುಷಗಳ ನಂತರವಾದರೂ ಬಿ.ಬಿ.ಸಿ. ಈ ಮಾತನ್ನು ಪುಷ್ಟಿಗೊಳಿಸಿರುವುದು ಸಂತಸದ ವಿಷಯ.

ಆದರೆ ಬ್ರಿಟಿಷರ ಆಳ್ವಿಕೆ ಕೊನೆಗೊಂಡಾಗ ಅವರ ಜೊತೆಗೇ ಕಣ್ಮರೆಯಾಗಬೇಕಾಗಿದ್ದ, ಸಮಸ್ತ ಭಾರತೀಯರಿಗೂ ಅಪಮಾನವೆನ್ನಿಸಬೇಕಾದ ಈ ಹಳಸಲು ವಾದದ ಆಧುನಿಕ ರಕ್ಷಕರು ಯಾರು? ನಮ್ಮವರೇ ಆದ, ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ಇನ್ನೂ ಪರಕೀಯರೇ ಆಗಿ ಉಳಿದಿರುವ ಬೆರಳೆಣಿಕೆಯಷ್ಟು ಬುದ್ಧಿಜೀವಿಗಳು. ಇಂತಹವರು ಉನ್ನತ ಪದವಿಗಳನ್ನು ಅಲಂಕರಿಸಿರುವುದರಿಂದಲೇ, ಆರ್ಯರು ಆಕ್ರಮಣಕಾರಿಗಳು ಎಂಬ ಭ್ರಮೆಯ ಸಿದ್ಧಾಂತವನ್ನು ಇನ್ನೂ ನಮ್ಮ ಮಕ್ಕಳು ಪಾಠಶಾಲೆಗಳಲ್ಲಿ ಕಲಿಯಬೇಕಾಗಿದೆ.

"ನನ್ನ ಪುರಾತನರು ಆಕ್ರಮಣಕಾರರು; ನನ್ನ ಸಂಸ್ಕೃತಿ ಪರಕೀಯ ಸಂಸ್ಕೃತಿ; ನನ್ನ ಧರ್ಮ ದಾಳಿಕೋರರು ಹೇರಿದ ಧರ್ಮ" ಎಂದು ಓದುವ ಮತ್ತು ತಿಳಿಯುವ ವಿದ್ಯಾರ್ಥಿಯೊಬ್ಬ ದೇಶಭಕ್ತ ಹೇಗಾದಾನು? ಅವನು ನಿಜವಾದ ಅರ್ಥದಲ್ಲಿ ಈ ದೇಶದ ಪ್ರಜೆ ಆಗುವನೇ? ಇಂತಹ ಕುಸಂಸ್ಕಾರಗಳಿಗೆ ಹೊಣೆಗಾರರು ಯಾರು? ಯೋಚಿಸಿ ನೋಡಿ. ✪